ಪ್ರತಿಬಿಂಬ
**PRATIBIMBA – Multidisciplinary Kannada Research Journal of IIMRD**
**ISSN: 2582-2284**
**Vol-3 Issue 2, Sep-Oct, 1-12**
**©*IIMRD*, Mysuru**
IIMRD JOURNALS
**www.iimrd.com**

# ಶಾಸನಗಳಲ್ಲಿ ಕಂಡಂತೆ ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದ ದಾನ ಧರ್ಮ ಸೇವೆ

**ಡಾ. ಎಸ್. ಜಿ. ರಾಮದಾಸ ರೆಡ್ಡಿ***
*ಇತಿಹಾಸ ಸಹ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕುವೆಂಪುನಗರ, ಮೈಸೂರು

***ಸಾರಾಂಶ (Abstract)***

*ದಕ್ಷಿಣ ಭಾರತದ ರಾಜಕೀಯ ಮತ್ತು ಸಾಂಸ್ಕೃತಿಕ ಇತಿಹಾಸದಲ್ಲಿ ಮೈಸೂರು ಸಂಸ್ಥಾನದ ಒಡೆಯರ ಸ್ಥಾನ ದೊಡ್ಡದು. ಇವರು ವಿಜಯನಗರ ಸಾಮ್ರಾಜ್ಯದ ನಂತರ ಭಾರತದಲ್ಲಿ ಪ್ರಖ್ಯಾತವಾದ ಹಿಂದೂ ಸಾಮ್ರಾಜ್ಯವನ್ನು ಕಟ್ಟಿದವರು. ತಮ್ಮ ರಾಜಕೀಯ ಚಾಣಾಕ್ಷತನದಿಂದ ಒಂದು ಹಳ್ಳಿಯಿಂದ ಬೃಹತ್ ಸಾಮ್ರಾಜ್ಯವನ್ನೇ ನಿರ್ಮಿಸಿ ಅದರ ಮೂಲಕ ಸಾಮಾಜಿಕ, ಆರ್ಥಿಕ, ಧಾರ್ಮಿಕ, ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಉತ್ತಮವಾದ ಸಾಧನೆಗಳನ್ನು ಮಾಡಿ ಅಂದಿನ ಮೈಸೂರು ಸಂಸ್ಥಾನವನ್ನು ಮಾದರಿ ಸಂಸ್ಥಾನವನ್ನಾಗಿ ಮಾಡಿದ ಕೀರ್ತಿ ಮೈಸೂರು ಅರಸರಿಗೆ ಸಲ್ಲುತ್ತದೆ. ಪ್ರಸ್ತುತ ಲೇಖನದಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರ್ ಕಾಲದಲ್ಲಿ ನೀಡಿರುವ ದಾನ-ಧರ್ಮವನ್ನು ಶಾಸನಗಳ ಆಧಾರದ ಮೇಲೆ ವಿಶ್ಲೇಷಿಸಲಾಗಿದೆ*

***ಮುಖ್ಯಪದಗಳು (Keywords)* :** ಮುಮ್ಮಡಿ ಕೃಷ್ಣರಾಜ ಒಡೆಯರು, ಮೈಸೂರು ಅರಸರು, ಶಾಸನಗಳು, ದಾನ–ಧರ್ಮ.

## ಪೀಠಿಕೆ

ಮೈಸೂರಿನ ದೊರೆಗಳು ಸಂಪ್ರದಾಯವಾದಿಗಳಾಗಿದ್ದರೂ ಕೂಡ ಬದಲಾದ ಕಾಲಕ್ಕನುಗುಣವಾಗಿ ಹೊಂದಿ ಕೊಂಡು ರಾಜತ್ವವನ್ನು ಬಿಟ್ಟು ಕೊಟ್ಟು ಪ್ರಜಾಪ್ರಭುತ್ವಕ್ಕೆ ನಾಂದಿ ಹಾಡಿದವರು. ಇಂತಹ ರಾಜವಂಶದಲ್ಲಿ ತಮ್ಮ ಸಾಧನೆಗಳಿಂದ ಪ್ರಖ್ಯಾತ ಗಳಿಸಿದ ಅರಸರಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರು ಪ್ರಮುಖರು, ಇವರಿಗೆ ರಾಜಕೀಯಕ್ಕಿಂತ ಸಾಂಸ್ಕೃತಿಕ ಸಾಧನೆಗಳತ್ತ ಹೆಚ್ಚಿನ ಒಲವಿತ್ತು. ಮುಮ್ಮಡಿ ಕೃಷ್ಣರಾಜಒಡೆಯರು ಮೈಸೂರು ರಾಜ್ಯದ ಇತಿಹಾಸದಲ್ಲಿ ತುಂಬಾ ಕಷ್ಟಕರ ಸಂದರ್ಭದಲ್ಲಿ ಅಧಿಕಾರಕ್ಕೆ ಬಂದವರು. 1782 ರಿಂದ 1799ರವರೆಗೆ ಸರ್ವಾಧಿಕಾರಿಯಾಗಿದ್ದ ಟಿಪ್ಪು ಸುಲ್ತಾನ್, ಖಾಸ ಚಾಮರಾಜ ಒಡೆಯರು ಸ್ವರ್ಗಸ್ಥರಾದ (1796) ಮೇಲೆ ಮುಮ್ಮಡಿ ಕೃಷ್ಣರಾಜಒಡೆಯರಿಗೆ ಪಟ್ಟಾಭಿಷೇಕ ಮಾಡದೇ ಸ್ವೇಚ್ಛೆಯಿಂದ ವರ್ತಿಸುತ್ತಿದ್ದಾಗ ಮಹಾರಾಣಿ ಲಕ್ಷ್ಮಮ್ಮಣ್ಣಿಯವರು ಬ್ರಿಟಿಷರೊಡನೆ ಔಪಚಾರಿಕ ಒಪ್ಪಂದವನ್ನು

*Please cite this article as: ರಾಮದಾಸ ರೆಡ್ಡಿ, ಎಸ್.ಜಿ. (2021). ಶಾಸನಗಳಲ್ಲಿ ಕಂಡಂತೆ ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದ ದಾನ ಧರ್ಮ ಸೇವೆ. ಪ್ರತಿಬಿಂಬ: ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 3(2). ಪು.ಸಂ. 1–12*

ಮಾಡಿ ಕೊಂಡರು. ಬ್ರಿಟಿಷರೊಡನೆ 1799ರ ನಾಲ್ಕನೇ ಆಂಗ್ಲೋ ಮೈಸೂರು ಯುದ್ಧದಲ್ಲಿ ಟಿಪ್ಪುವಿನ ಮರಣನಂತರ, ಮೈಸೂರು ರಾಜ್ಯದ ಆಡಳಿತವನ್ನು ಪುನಃ ಮೈಸೂರು ಅರಸು ಮನೆತನಕ್ಕೆ ವಹಿಸಬೇಕೆಂಬ ಒಪ್ಪಂದವಾಯಿತು. ಅದಕ್ಕೆ ಅಂತರಿಕ ವಿರೋಧಗಳು ತುಂಬಾ ಬಲವಾಗಿದ್ದವು. ಮಹಾರಾಣಿಲಕ್ಷ್ಮಮ್ಮಣ್ಣಿಯವರ ದಕ್ಷ ಮತ್ತು ವಿಚಕ್ಷಣಾ ಮನೋಭಾವದಿಂದ ಒಪ್ಪಂದವು ಕೈಗೂಡಿತು. ಆಗ ಕೇವಲ ಐದು ವರ್ಷದ ಬಾಲಕನಾಗಿದ್ದ ಮುಮ್ಮಡಿ ಕೃಷ್ಣರಾಜಒಡೆಯರ ಪರವಾಗಿ, ಮಹಾರಾಣಿಯವರು ಮತ್ತು ದಿವಾನ್ ಪೂರ್ಣಯ್ಯನವರು ಆಡಳಿತ ನಡೆಸಬೇಕೆಂದು ಒಪ್ಪಂದವಾಯಿತು. ಕರಾರಿನ ಪ್ರಕಾರ ಬ್ರಿಟಿಷರಿಂದ ಮುಮ್ಮಡಿ ಕೃಷ್ಣರಾಜಒಡೆಯರಿಗೆ 1799 ಜೂನ್ 30 ರಂದು ಪಟ್ಟಾಭಿಷೇಕ ಮಾಡಿದರು.

**ಮುಮ್ಮಡಿ ಕೃಷ್ಣರಾಜ ಒಡೆಯರ್‌ರವರ ಬಾಲ್ಯ ಜೀವನ:**

ಖಾಸ ಜಯಚಾಮರಾಜ ಒಡೆಯರು ಮತ್ತು ಕೆಂಪನಂಜಾಂಭೆ ಅಥವಾ ಕೆಂಪನಂಜಾಮ್ಮಣ್ಣಿರವರ ಮಗನಾಗಿ ಜುಲೈ 14, 1794 ರಂದು ಜನಿಸಿದ ಮುಮ್ಮಡಿ ಕೃಷ್ಣರಾಜ ಒಡೆಯರ್ ಮಹಾರಾಣಿ ಲಕ್ಷಮ್ಮಣಿಯವರ ಪೋಷಣೆಯಲ್ಲಿ ಬೆಳೆದರು. ಮುಮ್ಮಡಿ ಕೃಷ್ಣರಾಜಒಡೆಯರಿಗೆ ದ್ಯಾವಜಮ್ಮಣ್ಣಿ, ದೇವಾಂಬಾದೇವಮ್ಮಣ್ಣಿ, ಚೆಲುವಾಂಬಾದೇವಮ್ಮಣ್ಣಿ, ಲಿಂಗಜಾಂಬಾದೇವಮ್ಮಣ್ಣಿ, ಮುದ್ದುಲಿಂಗಾಂಬಾದೇವಮ್ಮಣ್ಣಿ ಮೊದಲಾದ 20 ಮಂದಿ ಪತ್ನಿಯರಿದ್ದರು. ಇವರು ತಮ್ಮ 74 ನೇ ವಯಸ್ಸಿನಲ್ಲಿ (ಮಾರ್ಚ್ 28, 1868) ತೀರಿ ಕೊಂಡರು. ಮುಮ್ಮಡಿ ಕೃಷ್ಣರಾಜಒಡೆಯರು ಅವರ ಅಧಿಕಾರದ ಅವಧಿಯಲ್ಲಿ ಉತ್ತಮ ಆಡಳಿತಗಾರರಾಗಿದ್ದರಲ್ಲದೆ, ಮಾದರಿ ಸಾಂಸ್ಕೃತಿಕ ಕೊಡುಗೆಗಳನ್ನು ನೀಡಿದ್ದಾರೆ.

ಮಹಾರಾಜಾಧಿರಾಜಾ, ಚಕ್ರವರ್ತಿಮಂಡಲಾನುಭೂತ, ರಾಜಪರಮೇಶ್ವರ, ಪ್ರೌಢಪ್ರತಾಪಾ ಅಪ್ರತಿಮವೀರನರಪತಿ, ಬಿರುದೇಂಬರಗಂಡ, ಲೋಕೈಕವೀರ, ಶಂಖಚಂಕ್ರಾಂಕುಶಕುಠಾರ, ಮಕರಮತ್ಸ್ಯಶರಭಸಾಳ್ವಗಂಡಬೇರುಂಡ, ಶ್ರೀಮತ್ಸಮಸ್ತ ಭೂಮಂಡಲ ಮಂಡನಾಯಮಾನೆ, ಕರ್ನಾಟಕ ಜನಪದಾದಿಷ್ಠಾನ, ಭೂತಮಹಿಶೂರರತ್ನ, ಯದುಕುಲಪಯ : ಪಾರಾವಾರಕಳಾನಿಧಿ, ಧರಣೀವರಹಾ ಹನುಮದ್ಗರುಡ ಕಂಠೀರ ವಾದ್ಯ,[1] ಇತ್ಯಾದಿ ಬಿರುದುಗಳನ್ನು ಹೊಂದಿದ್ದ ಮುಮ್ಮಡಿ ಕೃಷ್ಣರಾಜ ಒಡೆಯರ್ ಅನೇಕ ದಾನ–ಧರ್ಮಗಳ ಸೇವೆಗಳನ್ನು ನೀಡಿದ್ದು, ಅವರು ನೀಡಿರುವ ಸೇವೆಗಳನ್ನು ಶಾಸನಗಳ ಆಧಾರದ ಮೇಲೆ ಚಾರಿತ್ರಿಕ ದೃಷ್ಟಿಕೋನದಿಂದ ಚರ್ಚಿಸಿದ್ದೇನೆ.

ಮುಮ್ಮಡಿ ಕೃಷ್ಣರಾಜಒಡೆಯರು ಸೆಪ್ಟಂಬರ್ 27, 1821 ರಂದು ಮೈಸೂರು ಪ್ರಸನ್ನನಂಜುಂಡೇಶ್ವರ ದೇವರ ವಿಶೇಷ ಪಡಿತರ ದೀಪಾರಾಧನೆ ಮತ್ತು ರಥೋತ್ಸವಾದಿಗಳಿಗೆ ವರ್ಷಕ್ಕೆ 393 ವರಹಾ ಕೊಟ್ಟಿದ್ದು,[2] ಮೈಸೂರಿನ ಪರಕಾಲ ಮಠದಲ್ಲಿ ಮಂಟಪ ಕಟ್ಟಿಸಿ ಶ್ರೀಹಯಗ್ರೀವ ದೇವರನ್ನು ಪ್ರತಿಷ್ಠೆ ಮಾಡಿಸಿದರು.[3] ಇದರ ವೆಚ್ಚಕ್ಕೆ 750 ವರಹಾ ಕೊಟ್ಟ ಬಗ್ಗೆ ಮಾಹಿತಿ ಇದೆ.[4] ಹಾಗೂ ಇದೇ ಮಠದ ನಮ್ಮಾಳ್ವಾರ ಗುಡಿಯಲ್ಲಿರುವ ಒಂಬತ್ತು ಆಳ್ವಾರು ವಿಗ್ರಹಗಳನ್ನು ಪ್ರತಿಷ್ಠಾಪಿಸಿರುವ ಬಗ್ಗೆ ಉಲ್ಲೇಖವಿದೆ.[5] ಮೈಸೂರಿನ ಪರಕಾಲಮಠದ ಸ್ವಾಮಿಗೆ ರತ್ನಪಡಿ ಶಠಗೋಪಶಕಾಬ್ಧವನ್ನು 1816 ರಲ್ಲಿ ಸೇವೆ ಸಲ್ಲಿಸಿದ ಬಗ್ಗೆ ಮಾಹಿತಿ ಇದೆ.[6] ಹಾಗೂ ಇದೇ ಮಠದ ಶ್ರೀನಿವಾಸ ಬ್ರಹ್ಮತಂತ್ರ ಪರಕಾಲಸ್ವಾಮಿಗಳವರ ಸನ್ನಿಧಿಗೆ ಅಲಂಕಾರಗೊಂಡ ಬಂಗಾರಬಟ್ಟಲನ್ನು 1828 ರಂದು ದಾನ ನೀಡಿದ ಬಗ್ಗೆ [7] ಹಾಗೂ ಹಯಗ್ರೀವ ದೇವರಿಗೆ ಬೆಳ್ಳಿ

ಮುಕ್ಕಾಲುಮಣೆ ಸೇವೆಯ ಬಗ್ಗೆ ಉಲ್ಲೇಖವಿದೆ.[8] ಮೈಸೂರಿನ ಅಹೋಬಲ ಮಠದಲ್ಲಿ ಮಂಟಪ ಕಟ್ಟಿಸಿ ಲಕ್ಷ್ಮೀನರಸಿಂಹ ದೇವರನ್ನು ಪ್ರತಿಷ್ಠೆ ಮಾಡಿಸಿ 756 ವರಹಾ ಕೊಟ್ಟ ಬಗ್ಗೆ ಮಾಹಿತಿ ತಿಳಿಸುತ್ತದೆ.[9] ಮುಮ್ಮಡಿಯವರು ಅರಮನೆಯಲ್ಲಿರುವ ಚಿನ್ನದ ಸಿಂಹಾಸನದ ಛತ್ರಿಯನ್ನು ಕೊಡುಗೆಯಾಗಿ ಕೊಟ್ಟ ಬಗ್ಗೆ ಉಲ್ಲೇಖವಿದೆ.[10]

ಮುಮ್ಮಡಿ ಕೃಷ್ಣರಾಜ ಒಡೆಯರ ಪಟ್ಟದಮಹಿಷಿಯರಾದ––ದೇವಾಜಂಮ್ಮಣಿ–ಲಕ್ಷೀವಿಲಾಸದ ದೇವಾಂಬ ಅಗ್ರಹಾರ ಎಂಬ ಹೆಸರನ್ನು ಇಟ್ಟರು. ಮೈಸೂರು ಕೋಟೆಗೆ ಪಶ್ಚಿಮ ಭಾಗ, ಖಾಸ ಕುದುರೆಲಾಯಕ್ಕೆ ಬಲಭಾಗದಲ್ಲಿ 21 ಮನೆಗಳನ್ನು ಕಟ್ಟಿಸಿ ಅಗ್ರಹಾರ ಪ್ರತಿಷ್ಠಾಪನೆ ಮಾಡಿಸಿ, ಅಗ್ರಹಾರಕ್ಕೆ ಚರ್ತುದಿಕ್ಕಿನಲ್ಲೂ ವಾಮನಮುದ್ರೆಕಲ್ಲು ಶಿಲಾ ಪ್ರತಿಷ್ಠಾಪನೆ ಮಾಡಿಸಿ, ಈ ಅಗ್ರಹಾರಕ್ಕೆ ಈಶಾನ್ಯ ಭಾಗದಲ್ಲಿ ಶಿವ ದೇವಾಲಯ ನಿರ್ಮಿಸಿ ಪ್ರಸನ್ನ ನಂಜುಂಡೇಶ್ವರ ಮೂರ್ತಿಯನ್ನು ಪ್ರತಿಷ್ಠಾಪಿಸಿದರು. ಹಾಗೂ ದೇವರ ದೀಪಾರಾಧನೆ, ರಥೋತ್ಸವಾದಿಗಳಿಗೆ ವರ್ಷಂಪ್ರತಿ 792 ವರಹಾ ಅದಾಯ ಬರುವ ಗ್ರಾಮಗಳನ್ನು ಕೊಟ್ಟ ಬಗ್ಗೆ ಉಲ್ಲೇಖವಿದೆ.[11]

ಮುಮ್ಮಡಿ ಕೃಷ್ಣರಾಜ ಒಡೆಯರ ಧರ್ಮಪತ್ನಿ ಲಿಂಗಾಜಂಮಣಿ ಅವರ ಹೆಸರಿನಲ್ಲಿ ಲಿಂಗಾಂಬಾ ಅಗ್ರಹಾರ (ಕೃಷ್ಣವಿಳಾಸದ) ಎಂಬ ಹೆಸರು ಇಟ್ಟು, ಮೈಸೂರು ಕೋಟೆಗೆ ಪಶ್ಚಿಮ ಭಾಗ, ಖಾಸ ಕುದುರೆಲಾಯಕ್ಕೆ ಎಡಭಾಗದಲ್ಲಿ ಅಗ್ರಹಾರಕ್ಕೆ ಎದುರಾಗಿ 21 ಮನೆಗಳನ್ನು ಹಾಗೂ ಪರಕಾಲ ಮಠವನ್ನು ನಿರ್ಮಾಣ ಮಾಡಿ ಅಗ್ರಹಾರವನ್ನು ಪ್ರತಿಷ್ಠಾಪಿಸಿದರು. ಅಗ್ರಹಾರಕ್ಕೆ ಚರ್ತುದಿಕ್ಕಿನಲ್ಲೂ ವಾಮನಮುದ್ರೆಕಲ್ಲು ಶಿಲಾಪ್ರತಿಷ್ಠಾಪನೆ ಮಾಡಿಸಿದರು. ಅಗ್ರಹಾರದಲ್ಲಿರುವ ಪರಕಾಲಮಠದಲ್ಲಿ ಮಂಟಪವನ್ನು ಕಟ್ಟಿಸಿ ಸ್ತ್ರೀಹಯಗ್ರೀವ ದೇವರನ್ನು ಪ್ರತಿಷ್ಠಾಪಿಸಿದರು. 756 ವರಹಾ ಬರುವ ಗ್ರಾಮಗಳನ್ನು ಕೊಟ್ಟ ಬಗ್ಗೆ ಉಲ್ಲೇಖವಿದೆ.[12]

ಮುಮ್ಮಡಿ ಕೃಷ್ಣರಾಜ ಒಡೆಯರ ಧರ್ಮಪತ್ನಿ ರಮಾವಿಳಾಸದ ಚಲುವಾಜಂಮಣಿಯವರು ಅವರ ಹೆಸರಿನಲ್ಲಿ ಚಲುವಾಂಬಾ ಅಗ್ರಹಾರ ಎಂಬ ಹೆಸರನ್ನು ಇಟ್ಟು, ಮೈಸೂರು ಕೋಟೆಗೆ ಪಶ್ಚಿಮ ಭಾಗ, ಖಾಸ ಕುದುರೆಲಾಯಕ್ಕೆ ಬಲಭಾಗದಲ್ಲಿ ಅಗ್ರಹಾರದ ಹಿಂಭಾಗದಲ್ಲಿ 20 ಮನೆಗಳನ್ನು ಹಾಗೂ ಅಹೋಬಲಮಠವನ್ನು ಸೇರಿ 21 ಮನೆಗಳನ್ನು ಕಟ್ಟಿಸಿ ಅಗ್ರಹಾರ ಪ್ರತಿಷ್ಠಾಪಿಸಿದರು. ಅಗ್ರಹಾರದಲ್ಲಿರುವ ಅಹೋಬಲಮಠದಲ್ಲಿ ಮಂಟಪ ಕಟ್ಟಿಸಿ ಶ್ರೀಲಕ್ಷೀನರಸಿಂಹದೇವರನ್ನು ಪ್ರತಿಷ್ಠಾಪಿಸಿದರು. ಹಾಗೂ ದೇವರ ದಿನನಿತ್ಯದ ಕಾರ್ಯಗಳಿಗೆ ಗ್ರಾಮಗಳನ್ನು ದತ್ತಿ ಕೊಟ್ಟ ಬಗ್ಗೆ ಉಲ್ಲೇಖವಿದೆ.[13]

ಮೈಸೂರು ಆರಮನೆಯ ಪ್ರಸನ್ನ ಕೃಷ್ಣಸ್ವಾಮಿ ದೇವರ ಸನ್ನಿಧಿಯ ಮಹಾಧ್ವಾರದ ಮೇಲೆ ಸ್ವರ್ಣಕಲಶ ನಿರ್ಮಿಸಿರುವುದು, ರುಕ್ಮೀಣಿ, ಸತ್ಯಭಾಮ ಸಮೇತ ಪ್ರಸನ್ನಕೃಷ್ಣಸ್ವಾಮಿಯನ್ನು ಪ್ರತಿಷ್ಠಾಪಿಸಿರುವುದು, ಶ್ರೀರಂಗನಾಥ, ವೆಂಕಟರಮಣಸ್ವಾಮಿ, ಲಕ್ಷ್ಮೀನರಸಿಂಹಸ್ವಾಮಿ, ಶ್ರೀರಾಮಸ್ವಾಮಿ ಮೊದಲಾದ ದೇವರನ್ನು ಮತ್ತು ರಾಮಾನುಜಾಚಾರ್ಯರು ಮೊದಲಾದ ಪೂರ್ವಾಚಾರ್ಯರ ವಿಗ್ರಹಗಳು ಈ ವಿಗ್ರಹಗಳಿಗೆ ಉತ್ಸವ ವಿಗ್ರಹಗಳನ್ನು ಪ್ರತಿಷ್ಠಾಪಿಸಿದರು. ಕಾಂಚಿನಗರದಿಂದ ಪೂರ್ವದಲ್ಲಿ ತೆರಕಣಾಂಬಿಗೆ ದಯಾ ಮಾಡಿದ್ದ ಪೆರಂದೇವಿ ಅಮ್ಮನವರನ್ನು ಪ್ರತಿಷ್ಠೆ ಮಾಡಿಸಿದರು. ಮೇಲುಕೋಟೆ ಶ್ರೀನಾರಾಯಣಸ್ವಾಮಿ ಸನ್ನಿಧಿಯಿಂದ

ಶ್ರೀಶಠಗೋಪವಂ ಬಿಜಮಾಡಿಶಿ ಈ ದೇವರುಗಳಿಗೆ ನಿತ್ಯಾ ದೀಪಾರಾಧನೆ, ಪಕ್ಷೋತ್ಸವ, ಮಾಸೋತ್ಸವ, ಸಂವತ್ಸರೋತ್ಸವ, ರಥೋತ್ಸವ ಮುಂತಾದ ಉತ್ಸವಗಳು ಧರ್ಮಾಧ್ಯಯನ, ರಾಮಾನುಜಾಕೂಟ ಮುಂತಾದ ಸೇವೆಗಳು ನಡೆಯಲು ವರ್ಷಕ್ಕೆ 50,000 ಕಂಠಿರಾಯ, 5 ಸಾವಿರ ವರಹ ನಿಗಧಿಗೊಳಿಸಿ ಸುಭೇದಾರನ ಹೆಸರಿಗೆ ಅಜ್ಞಾಪಿಸಿದರು. ತೀರ್ಥಪ್ರಸಾದಗಳನ್ನು ಸ್ವೀಕರಿಸಲು ಸನ್ನಿಧಿಯಲ್ಲಿ ಲಕ್ಷ್ಮೀವಿಲಾಸದ ಪಟ್ಟದಮಹಿಷಿ, ಕೃಷ್ಣವಿಲಾಸದ ಧರ್ಮಪತ್ನಿ, ರಾಮವಿಲಾಸದ ಧರ್ಮಪತ್ನಿ ಸಮೇತ ನಮ್ಮ ಪ್ರತಿಮೆಗಳನ್ನು ಪ್ರತಿಷ್ಠಾಪಿಸುವುದು ಎಂದು ಉಲ್ಲೇಖಿಸಿದೆ. ಈ ದೇವಾಲಯದ ಭಕ್ತ ವಿಗ್ರಹ ಗುಡಿಯಲ್ಲಿ 5 ಶಿಲಾ ವಿಗ್ರಹಗಳನ್ನು, ನಾಲ್ಕು ತಾಮ್ರದ ವಿಗ್ರಹಗಳನ್ನು ಕೊಡುಗೆ ಕೊಟ್ಟ ಬಗ್ಗೆ ಮಾಹಿತಿ ಇದೆ.[14]

ಮುಮ್ಮಡಿಯವರು ಇದೇ ಪ್ರಸನ್ನ ಕೃಷ್ಣಸ್ವಾಮಿ ದೇವಾಲಯದ ಭಕ್ತ ವಿಗ್ರಹ ಗುಡಿಯ ಬಲಿ ಪೀಠಕ್ಕೆ ಹಿತ್ತಾಳೆ ತಗಡಿನ ಸೇವೆಯನ್ನು 1845 ಫೆಬ್ರವರಿ 22 ರಂದು ಮಾಡಿಸಿದ ಬಗ್ಗೆ ಮಾಹಿತಿ.[15] ಗರ್ಭಗುಡಿ ಬಾಗಿಲಿಗೆ ಚಿನ್ನದ ಭಾಗಿಲುವಾಡ, ಸುಖನಾಸಿಗೆ ಹಿತ್ತಾಳೆ ಲೋಹದ ಬಾಗಿಲುವಾಡ[16] ಹಾಗೂ ಪ್ರಸನ್ನ ಕೃಷ್ಣಸ್ವಾಮಿಗೆ ಬೆಣ್ಣೆ ದೊಣ್ಣೆಗಳನ್ನು,[17] ಇದೇ ಪ್ರಸನ್ನ ಕೃಷ್ಣಸ್ವಾಮಿಯ ಮೂಲ ವಿಗ್ರಹಕ್ಕೆ ಬೆಳ್ಳಿಪೀಠವನ್ನು ಹಾಗೂ ಬೆಳ್ಳಿಯ ಪ್ರಭಾವಳಿಯನ್ನು,[18] ಹಾಗೂ ಇದೇ ದೇವಾಲಯಕ್ಕೆ ಶಯನೋತ್ಸವದ ಚಪ್ಪರಗಾಲು ಮಂಚವನ್ನು,[19] ಚಿನ್ನ,ಬೆಳ್ಳಿ ಲೋಹದ ಗರುಡ ವಾಹನವನ್ನು 1848 ಜನವರಿ 12 ರಂದು ಕೊಡುಗೆ ಕೊಟ್ಟ ಬಗ್ಗೆ ಮಾಹಿತಿ,[20] ಈ ದೇವಾಲಯಕ್ಕೆ 1848 ರಂದು ಬೆಳ್ಳಿ ಲೋಹದ ಪೆರುಂದೇವಿ ಅಮ್ಮನವರನ್ನು ಕೊಡುಗೆ ನೀಡಿದ ಬಗ್ಗೆ[21] ಮುಮ್ಮಡಿಯವರು ಪ್ರಸನ್ನ ಕೃಷ್ಣಸ್ವಾಮಿ ದೇವಾಲಯದ ಸತ್ಯಭಾಮ ಅಮ್ಮನವರ ಉತ್ಸವ ಪೀಠಕ್ಕೆ ಹಿತ್ತಾಳೆ ತಗಡಿನ ಸೇವೆ ಮಾಡಿದ ಬಗ್ಗೆ,[22] ಹಾಗೂ ದೇವಾಲಯದ ತುಲಾಭಾರ ಪ್ರತಿಷ್ಠೆ ಮಾಡಿಸಿದ ಬಗ್ಗೆ ಉಲ್ಲೇಖವಿದೆ.[23]

ಮುಮ್ಮಡಿಯವರು ಪ್ರಸನ್ನ ಕೃಷ್ಣಸ್ವಾಮಿ ದೇವಾಲಯಕ್ಕೆ ಹೊಸರಥವನ್ನು ಮಾಡಿಸಿ ಕೊಟ್ಟ ಬಗ್ಗೆ,[24] ದೇವಾಲಯಕ್ಕೆ ಬೆಳ್ಳಿಪಾತ್ರೆ ,[25] ಬೆಳ್ಳಿಪೀಠ ಮತ್ತು ಪ್ರಭಾವಳಿಯನ್ನು 1810 ಆಗಸ್ಟ್ 14 ರಂದು ಮಾಡಿಸಿ ಕೊಟ್ಟ ಬಗ್ಗೆ ಉಲ್ಲೇಖವಿದೆ.[26] ಇದೇ ಪ್ರಸನ್ನ ಕೃಷ್ಣಸ್ವಾಮಿ ದೇವಾಲಯದ ಸತ್ಯಭಾಮ ಅಮ್ಮನವರ ಗುಡಿಯಲ್ಲಿರುವ ದೇಶಿಕವಿಗ್ರಹ ಸೇವೆ ನೀಡಿದ ಬಗ್ಗೆ ಉಲ್ಲೇಖವಿದೆ,[27] ಹಾಗೂ ಅರಮನೆಯಲ್ಲಿರುವ ಸಿಂಹಾಸನಕ್ಕೆ ಬಂಗಾರದ ಛತ್ರಿ ಕೊಡುಗೆ ಕೊಟ್ಟ ಬಗ್ಗೆ ಮಾಹಿತಿ ಇದೆ.[28] ಚಾಮುಂಡಿ ಬೆಟ್ಟದ ಮಹಾಬಲೇಶ್ವರಸ್ವಾಮಿ ದೇವಸ್ಥಾನದ ಸುಖನಾಸಿಯ ಬಾಗಿಲವಾಡಕ್ಕೆ ಮುಮ್ಮಡಿ ಕೃಷ್ಣರಾಜ ಒಡೆಯರ ರಾಣಿ ಕೃಷ್ಣವಿಲಾಸ (ನಾಲ್ಕನೇಯವರು) ಸನ್ನಿಧಾನದಿಂದ ಹಿತ್ತಾಳೆ ಚೌಕಟ್ಟು ಮಾಡಿಸಿಕೊಟ್ಟ ಬಗ್ಗೆ ಮಾಹಿತಿ ತಿಳಿಸುತ್ತದೆ.[29] ಹಾಗೂ ಇದೇ ಬೆಟ್ಟದ ಮಹಾಬಲೇಶ್ವರಸ್ವಾಮಿ ದೇವಸ್ಥಾನದಲ್ಲಿರುವ ಉತ್ಸವಮೂರ್ತಿ ಬಾಗಿಲಿಗೆ ಹಿತ್ತಾಳೆಯ ಚೌಕಟ್ಟನ್ನು ಮಾಡಿಸಿ ಕೊಟ್ಟರು.[30]

ಚಾಮುಂಡಿಬೆಟ್ಟದ ಚಾಮುಂಡೇಶ್ವರಿ ಅಮ್ಮನವರ ದೇವಸ್ಥಾನಕ್ಕೆ ಬೆಳ್ಳಿಯ ಸಹಸ್ರ ಧಾರಾಪಾತ್ರೆಯನ್ನು ದಾನ ಕೊಟ್ಟ ಬಗ್ಗೆ ಉಲ್ಲೇಖ ಇದೆ.[31] ಇದೇ ದೇವಸ್ಥಾನಕ್ಕೆ 1828 ಡಿಸೆಂಬರ್ 12 ರಂದು ಸುವರ್ಣರಜತ ಮಹಾಸಿಂಹವಾಹನವನ್ನು ಕೊಟ್ಟ ಬಗ್ಗೆ,[32] 150 ಕ್ಕೂ ಹೆಚ್ಚು ಆಭರಣಗಳನ್ನು ದಾನಕೊಟ್ಟ ಬಗ್ಗೆ ಸಿಂಹವಾಹನದ ಕೆಳಗೆ ಇರುವ ತಗಡಿನ ಮೇಲೆ ಶಾಸನದ ಉಲ್ಲೇಖವಿದೆ.[33] ಹಾಗೂ ದೇವಾಲಯದ

ಸುಖನಾಸಿ ಬಾಗಿಲಿನ ಚೌಕಟ್ಟಿಗೆ ಹಾಗೂ ನವರಂಗದ ಬಾಗಿಲಿಗೆ ಹಿತ್ತಾಳೆ ತಗಡನ್ನು ಮುಮ್ಮಡಿ ಕೃಷ್ಣರಾಜ ಒಡೆಯರ ಧರ್ಮಪತ್ನಿ ಕೃಷ್ಣವಿಲಾಸರವರು ಕೊಡುಗೆ ಕೊಟ್ಟ ಬಗ್ಗೆ ಮಾಹಿತಿ ಇದೆ.[34] ಚಾಮುಂಡಿ ಅಮ್ಮನವರ ಸನ್ನಿಧಿಯಲ್ಲಿ ಭಕ್ತವಿಗ್ರಹ ಕೊಠಡಿಯಲ್ಲಿ ಲಕ್ಷ್ಮೀವಿಲಾಸ ಪಟ್ಟದಮಹಿಷಿ, ಕೃಷ್ಣವಿಲಾಸ ಧರ್ಮಪತ್ನಿ, ರಾಮಾವಿಲಾಸ ಧರ್ಮಪತ್ನಿ ಹಾಗೂ ಮುಮ್ಮಡಿ ಕೃಷ್ಣರಾಜ ಒಡೆಯರ ಹೆಸರುಗಳನ್ನು ಇವರ ಶಿಲಾಪ್ರತಿಮೆಗಳ ಕೆಳಗೆ ಉಲ್ಲೇಖಿಸಲಾಗಿದೆ.[35] ಚಾಮುಂಡಿಅಮ್ಮನವರ ಸನ್ನಿಧಿಯಲ್ಲಿರುವ ಉತ್ಸವ ವಿಗ್ರಹ, ಬೆಳ್ಳಿ ಮಂಟಪವನ್ನು ಮುಮ್ಮಡಿ ಕೃಷ್ಣರಾಜಒಡೆಯರು ತಯಾರಿಸಿ ಕೊಟ್ಟ ಬಗ್ಗೆ ಮಾಹಿತಿ ತಿಳಿಸುತ್ತದೆ.[36] ಮುಮ್ಮಡಿಯರು ಚಾಮುಂಡಿ ಅಮ್ಮನವರ ಸನ್ನಿದಿಗೆ ದೊಡ್ಡ ಬೆಳ್ಳಿತಟ್ಟೆ, ಬೆಳ್ಳಿಅಡ್ಡಣಿಗೆ, ಬೆಳ್ಳಿ ಬಟ್ಟಲುಗಳನ್ನು ಕೊಡುಗೆ ನೀಡಿದ ಬಗ್ಗೆ[37] ಹಾಗೂ ಬೆಳ್ಳಿ ಗಂಟೆ, ಬೆಳ್ಳಿ ಬಟ್ಟಲು, ಎರಡು ಬೆಳ್ಳಿ ತಟ್ಟೆ, ಬೆಳ್ಳಿಚೆಂಬು ಕೊಡುಗೆ ನೀಡಿದ ಬಗ್ಗೆ ಮಾಹಿತಿ ಇದೆ.[38] 1857 ಅಕ್ಟೋಬರ್27 ರಂದು ಬಂಗಾರದ ಆಭರಣ, ನಕ್ಷತ್ರಮಾಲಿಕೆ ಮತ್ತು 30 ಪಾತ್ರೆಗಳನ್ನು ಕೊಡುಗೆ ಕೊಟ್ಟ ಬಗ್ಗೆ ಉಲ್ಲೇಖವಿದೆ.[39] ಒಡೆಯರ ಧರ್ಮಪತ್ನಿ ಮುದ್ದುಲಿಂಗಮ್ಮನವರು ಉತ್ತನಹಳ್ಳಿ ಅಮ್ಮನವರ ದೇವಸ್ಥಾನದ ಅಡ್ಡಣಿಗೆಯನ್ನು ಮಾಡಿಸಿದ ಬಗ್ಗೆ ಉಲ್ಲೇಖವಿದೆ.[40]

ರಾಜ ಒಡೆಯರು ಕಟ್ಟಿಸಿದ ಕೋಟೆ ವೆಂಕಟರಮಣಸ್ವಾಮಿ ದೇವಾಲಯದ ಗೋಪುರ ಮತ್ತು ಸುವರ್ಣಕಲಶ ಹಾಳಾಗಿದ್ದನ್ನು ಗಮನಿಸಿ ಮುಮ್ಮಡಿ ಕೃಷ್ಣರಾಜ ಒಡೆಯರು ಗೋಪುರ,ಮಹಾದ್ವಾರ ನಿರ್ಮಾಣ ಮಾಡಿಸಿ ಸುವರ್ಣಕಲಶಗಳನ್ನು ಪ್ರತಿಷ್ಠೆ ಮಾಡಿಸಿ, ಜೀರ್ಣೋದ್ದಾರ ಮಾಡಿಸಿದ ಬಗ್ಗೆ 1851 ನವಂಬರ್ 30 ಭಾನುವಾರದ ಶಾಸನ ಉಲ್ಲೇಖಿಸಿದೆ[41] ಹಾಗೂ ಮುಮ್ಮಡಿ ಕೃಷ್ಣರಾಜ ಒಡೆಯರು ಪಟ್ಟಾಭಿಷೇಕ ಮಹೋತ್ಸವ ಮಾಡಿದ ಸ್ಥಳದಲ್ಲಿ ಮಂಟಪವನ್ನು ಅನುಯಾಯಿಗಳು ಮಾಡಿಸಿದ ಬಗ್ಗೆ 1839 ಜುಲೈ 03 ರ ಶಾಸನ ಮಾಹಿತಿ ನೀಡುತ್ತದೆ.[42] ಕೋಟೆ ವೆಂಕಟರಮಣ ಸ್ವಾಮಿ ದೇವಾಲಯಕ್ಕೆ ಮುಮ್ಮಡಿಯವರು 2 ಬೆಳ್ಳಿ ಕೊಡಗಳನ್ನು ಕೊಡುಗೆ ನೀಡಿದ ಬಗ್ಗೆ,[43] ಇದೇ ದೇವಾಲಯಕ್ಕೆ ಆನೆ, ಗಂಟೆಯನ್ನು ಸೇವಾರ್ಥ ಕೊಟ್ಟ ಬಗ್ಗೆ ಮಾಹಿತಿ ತಿಳಿಸುತ್ತದೆ.[44]

ಮುಮ್ಮಡಿಯವರು 1828 ಮೇ 30 ರಂದು ವರಣಾ ಗ್ರಾಮದ ಮಹದೇಶ್ವರ ದೇವಾಲಯ ಮತ್ತು ಚಿನ್ನದ (ವಿಮಾನ) ಕಲಶ ನಿರ್ಮಿಸಿದರು. ದೇವಾಂಬುಂಧಿಯೆಂಬ ನೂತನ ಕೆರೆ ಕಟ್ಟಿಸಿದರು ಹಾಗೂ ದೇವರ ದೀಪಾರಾಧನೆಗೆ, ರಥೋತ್ಸವಾಧಿಗಳಿಗೆ ಕೆರೆಕೆಳಗಣ ಸರ್ಕಾರಿ ಭೂಮಿಯಲ್ಲಿ ಕಂಠಿರಾಯ 250 ವರಹದ ಭೂಮಿಯನ್ನು ಕೊಟ್ಟ ಬಗ್ಗೆ ಉಲ್ಲೇಖವಿದೆ.[45] ಹಾಗೂ ಟಿ.ನರಸೀಪುರ ತಾಲ್ಲೂಕಿನ ಸೊಸಲೆ ವ್ಯಾಸರಾಯ ಮಠದ ಗೋಪಾಲಕೃಷ್ಣದೇವರಿಗೆ ಸಿಂಹಾಸನವನ್ನು ಸೇವಾರ್ಥವಾಗಿ ನೀಡಿದರು.[46] ಹಾಗೂ ಸೊಸಲೆ ವ್ಯಾಸರಾಯ ಮಠದ ಕೃಷ್ಣ ಮತ್ತು ರಾಮನಿಗೆ ಚಿನ್ನದ ಮಂಟಪವನ್ನು ಕೊಡುಗೆ ನೀಡಿದ್ದಾರೆ.[47]

ಮುಮ್ಮಡಿ ಕೃಷ್ಣರಾಜ ಒಡೆಯರ ಮಗಳು ದೇವಾಜಮ್ಮಣ್ಣಿಯವರು ಮೂಗೂರಿನ ತಿಬ್ಬಾದೇವಿ ದೇವಸ್ಥಾನದ ಗರ್ಭಗುಡಿಯ ಬಾಗಿಲಿಗೆ ಹಿತ್ತಾಳೆಯ ಬಾಗಿಲುವಾಡ ನಿರ್ಮಿಸಿ ಕೊಟ್ಟ ಬಗ್ಗೆ ಮಾಹಿತಿ ಇದೆ.[48] ಮುಮ್ಮಡಿಯರು ಟಿ.ನರಸೀಪುರ ತಾಲ್ಲೂಕಿನ ವಿಜಯಪುರದ ಮೂಲ ಸ್ಥಾನೇಶ್ವರದೇವರಿಗೆ ಲಿಂಗ ಪ್ರತಿಷ್ಠಾಪಿಸಿ,ನೈವೇಧ್ಯಕ್ಕೆ ದಾನ ನೀಡಿದ ಬಗ್ಗೆ 1855 ಅಕ್ಟೋಬರ್ 13 ರ ಶಾಸನ ಮಾಹಿತಿ ನೀಡುತ್ತದೆ.[49] ಮುಮ್ಮಡಿಯರು ನಂಜನಗೂಡಿನ ನಂಜುಂಡೇಶ್ವರ ದೇವಾಲಯದಲ್ಲಿ ಬಾಲ ಕೆಂಪವಾಜೇಶ್ವರಸ್ವಾಮಿ

ದೇವಾಲಯದ ಬಾಗಿಲಿಗೆ ಹಿತ್ತಾಳೆ ಚೌಕಟ್ಟನ್ನು,[50] ನಂಜುಂಡೇಶ್ವರ ದೇವರ ಉತ್ಸವಮೂರ್ತಿ ವಿಗ್ರಹಕ್ಕೆ ಬೆಳ್ಳಿಮಂಟಪ[51], ಪಲ್ಲಕ್ಕಿಯ ಬೆಳ್ಳಿಯ ಅಣಸು ಮಾಡಿಸಿ ಕೊಟ್ಟ ಬಗ್ಗೆ,[52] ಹಾಗೂ ಇದೇ ದೇವಾಲಯದ ಶ್ರೀಕಂಠೇಶ್ವರ ದೇವರಿಗೆ 1848 ಜನವರಿ 20 ರಂದು ಬೆಳ್ಳಿಯ ನಂದಿವಾಹನ ಮತ್ತು ವಿವಿಧ ನಮೂನೆಯ ಆಭರಣಗಳನ್ನು,[53] 1847 ಆಗಸ್ಟ್ 26 ರಂದು ಗಜರಥವನ್ನು,[54] 1847 ನವಂಬರ್ 22 ರಂದು ಬೆಳ್ಳಿ ಕುದುರೆ,[55] 1852 ಫೆಬ್ರವರಿ 18 ರಂದು ಬೆಳ್ಳಿ ಕೈಲಾಸ ವಾಹನ ದಾನ ನೀಡಿದ ಬಗ್ಗೆ ಮಾಹಿತಿ ಇದೆ.[56]

ಮುಮ್ಮಡಿ ಕೃಷ್ಣರಾಜ ಒಡೆಯರು ನಂಜನಗೂಡಿನ ನಂಜುಂಡೇಶ್ವರ ದೇವಾಲಯದಲ್ಲಿ ಕಲ್ಲಿನ ಕಂಬಗಳನ್ನು ನಿರ್ಮಿಸಿ ಕೊಟ್ಟ ಬಗ್ಗೆ ಉಲ್ಲೇಖವಿದೆ.[57] ಇದೇ ದೇವಾಲಯದ ಗೌತಮ ರಥ, ಪಾರ್ವತಿ ದೇವಿಯ ರಥಗಳು ಶಿಥಿಲವಾಗಿದ್ದು 1819 ಏಪ್ರಿಲ್ 6 ರ ಸಮಯದಲ್ಲಿ ರಥಗಳನ್ನು ಜೀರ್ಣೋದ್ಧಾರ ಮಾಡಿಸಿದ ಬಗ್ಗೆ ಮಾಹಿತಿ ಇದೆ.[58] ಮುಮ್ಮಡಿಯರ ಧರ್ಮಪತ್ನಿ ಕೃಷ್ಣವಿಲಾಸದ ಲಿಂಗಾಜಮ್ಮಣ್ಣಿಯವರು ಚಾಮರಾಜನಗರದ ಗುಡ್ಡದಮಠ ಗ್ರಾಮದ ವೀರಭದ್ರದೇವಾಲಯವನ್ನು 1826 ಸೆಪ್ಟಂಬರ್ 17 ರಂದು ಜೀರ್ಣೋದ್ದಾರ ಮಾಡಿಸಿದ ಬಗ್ಗೆ ಉಲ್ಲೇಖವಿದೆ.[59] ಮುಮ್ಮಡಿ ಕೃಷ್ಣರಾಜ ಒಡೆಯರ ಧರ್ಮಪತ್ನಿ ಪುಟ್ಟತಾಯಮ್ಮಣ್ಣಿಯವರಿಂದ 1853 ಜೂನ್ 30 ರಂದು ಚಾಮರಾಜನಗರದ ಚಾಮರಾಜೇಶ್ವರಸ್ವಾಮಿಯ ಸನ್ನಿದಾನದಲ್ಲಿ ಬಾಲಕೆಂಪರಾಜೇಶ್ವರ ಮೂರ್ತಿಶಿಲ್ಪವನ್ನು ಪ್ರತಿಷ್ಠೆ ಮಾಡಿಸಿದ ಬಗ್ಗೆ ಮಾಹಿತಿ ಇದೆ.[60]

ಮುಮ್ಮಡಿಯವರು ಚಾಮರಾಜನಗರದ ಚಾಮರಾಜೇಶ್ವರಸ್ವಾಮಿಯ ಸನ್ನಿದಾನಕ್ಕೆ 1829 ಜೂನ್ 8 ರಂದು ಸುವರ್ಣಮಯ ಧ್ವಜಾಕಂಬವನ್ನು ಕೊಡುಗೆ ನೀಡಿದ ಬಗ್ಗೆ ಉಲ್ಲೇಖವಿದೆ.[61] ಹಾಗೂ ಚಾಮರಾಜನಗರದ ಚಾಮರಾಜೇಶ್ವರಸ್ವಾಮಿಯ ದೇವಸ್ಥಾನದ ಗೋಪುರವನ್ನು ಕಟ್ಟಿಸಿ, ಗೋಪುರಕ್ಕೆ ಸುವರ್ಣ ಕಲಶವನ್ನು 1867 ಮಾರ್ಚು 01 ಶುಕ್ರವಾರ ಪ್ರತಿಷ್ಠಾಪಿಸಿದರು.[62] ಗುಂಡ್ಲುಪೇಟೆ ತಾಲ್ಲೂಕಿನ ತೆರಕಣಾಂಬಿಯ ವರದರಾಜಸ್ವಾಮಿ ದೇವಸ್ಥಾನದ ತೆರಕಣಾಂಬಿ ಅಮ್ಮನವರ ಲೋಹದ ದೇವತಾಮೂರ್ತಿಯನ್ನು (ಉತ್ಸವ ಮೂರ್ತಿ)ದಾನ ನೀಡಿದರು.[63] ಗುಂಡ್ಲುಪೇಟೆ ತಾಲ್ಲೂಕಿನ ಕೆಲಸೂರಿನ ಚೈತ್ಯಾಲಯದಲ್ಲಿ ಚಂದ್ರಪ್ರಭ ತೀರ್ಥಂಕರ, ವಿಜಯ ಮತ್ತು ಜ್ವಾಲಿನಿ ದೇವರ ಶಿಲ್ಪಗಳನ್ನು ಸ್ಥಾಪಿಸಿ, ಚೈತ್ಯಾಲಯವನ್ನು ರಿಪೇರಿ ಮಾಡಿಸಿ, ಹೊಸದಾಗಿ ಬಣ್ಣವನ್ನು ಲೇಪನ ಮಾಡಿಸಿದ ಬಗ್ಗೆ 1829 ಜನವರಿ 12 ರ ಶಾಸನ ಉಲ್ಲೇಖಿಸುತ್ತದೆ.[64]

ಶ್ರೀರಂಗಪಟ್ಟಣದ ಶ್ರೀರಂಗನಾಥಸ್ವಾಮಿ ದೇವಾಲಯದ ಹತ್ತಿರ 1800 ಜುಲೈ 26 ರಂದು ವೇದಪುಷ್ಕರಣಿಯನ್ನು ಕಟ್ಟಿಸಿದರು.[65] ಇದೇ ಸ್ಥಳದ ಪ್ರಸನ್ನಕೃಷ್ಣಸ್ವಾಮಿ ದೇವಾಲಯದ ಹತ್ತಿರ 1829 ಅಕ್ಟೋಬರ್ 08 ರಂದು ಮಂಟಪ ಕಟ್ಟಿಸಿದ ಬಗ್ಗೆ ಉಲ್ಲೇಖವಿದೆ.[66] ಹಾಗೂ ಶ್ರೀರಂಗಪಟ್ಟಣದ ಶ್ರೀರಂಗನಾಥಸ್ವಾಮಿಗೆ ದೊಡ್ಡ ಬೆಳ್ಳಿಬಟ್ಟಲನ್ನು ದಾನ ನೀಡಿದರು. (18 ನೇಶತಮಾನ)[67]

ಮುಮ್ಮಡಿ ಕೃಷ್ಣರಾಜ ಒಡೆಯರು ಆಳ್ವಿಕೆ (1799–1868) ಮಾಡುತ್ತಿರುವಾಗ ತಂದೆಯವರಾದ ಚಾಮರಾಜಒಡೆಯರ ಜ್ಞಾಪಕಾರ್ಥಕವಾಗಿ ಚಂದ್ರವನ ಗ್ರಾಮದಲ್ಲಿ ಈಶ್ವರ ದೇವಾಲಯ ನಿರ್ಮಿಸಿದರು[68.] ಕನ್ನಂಬಾಡಿ (ಪಾಂಡವಪುರ.ತಾ.)ಗ್ರಾಮದ ಮಹಾಲಕ್ಷೀದೇವಾಲಯದಲ್ಲಿ ನೂತನವಾಗಿ ಮಹಾಕಾಳಿ, ಮಾಹಾಲಕ್ಷೀ, ಸರಸ್ವತಿ ಅಮ್ಮನವರು, ಪರಿವಾರ ಸಮೇತರಾಗಿ 1818 ಡಿಸೆಂಬರ್ 03 ರಂದು ಪ್ರತಿಷ್ಠೆ

ಮಾಡಿಸಿದ ಬಗ್ಗೆ ಉಲ್ಲೇಖವಿದೆ.[69] ಹಾಗೂ ಇದೇ ಕನ್ನಂಬಾಡಿ (ಪಾಂಡವಪುರ ತಾ.) ಗ್ರಾಮದಲ್ಲಿ ಕಣ್ಣೇಶ್ವರ ದೇವಸ್ಥಾನ ನಿರ್ಮಿಸಿದರು[70.] ಮೇಲುಕೋಟೆಯ ಚಲುವನಾರಾಯಣಸ್ವಾಮಿಗೆ ಕೃಷ್ಣರಾಜಮುಡಿ ಸಮರ್ಪಿಸಿದ ಬಗ್ಗೆ, [71] ಮುಮ್ಮಡಿಯರ ಧರ್ಮಪತ್ನಿ ಮುದ್ದಲಿಂಗಮ್ಮನವರು ಮೇಲುಕೋಟೆಯ ಚೆಲುವ ನಾರಾಯಣಸ್ವಾಮಿ ದೇವಸ್ಥಾನಕ್ಕೆ ಬೆಳ್ಳಿಬಟ್ಟಲು ಕೊಡುಗೆ ನೀಡಿದ ಬಗ್ಗೆ.[72] ಬಂಗಾರದಪಾದಗಳನ್ನು,[73] ದೇವರಿಗೆ ಬೆಳ್ಳಿಯ ಕೊಡವನ್ನು ಕೊಡುಗೆಯಾಗಿ ನೀಡಿದ ಬಗ್ಗೆ ಉಲ್ಲೇಖವಿದೆ.[74] ಒಡೆಯರ ಧರ್ಮಪತ್ನಿ ಕೃಷ್ಣವಿಲಾಸದ ಲಿಂಗಾಜೇಮ್ಮಣ್ಣಿಯವರು ಯೋಗನರಸಿಂಹಸ್ವಾಮಿ ದೇವರಿಗೆ ಒಟ್ಟು 656.8 ತೊಲ ತೂಕದ ಚಿನ್ನದ ಕಿರೀಟ, ಕಿರೀಟಅಡ್ಡಿಕೆಗಾಟು ಆಭರಣಗಳನ್ನು 1842 ಡಿಸೆಂಬರ್ 2 ಶುಕ್ರವಾರದಂದು ಕೊಡುಗೆ ನೀಡಿದ ಬಗ್ಗೆ ಶಾಸನ ಉಲ್ಲೇಖಿಸಿದೆ.[75]

ಒಡೆಯರು 1829 ಅಕ್ಟೋಬರ್,ನವಂಬರ್ ತಿಂಗಳಲ್ಲಿ ಮೇಲುಕೋಟೆಯ ಚೆಲುವನಾರಾಯಣಸ್ವಾಮಿ ದೇವಸ್ಥಾನದಲ್ಲಿ ಪಿಳ್ಳೈಲೋಕಾಚಾರ್ಯರ ವಿಗ್ರಹವನ್ನು ಪ್ರತಿಷ್ಠಾಪಿಸಿದರು.[76] ಇದೇ ಸ್ಥಳದ ಕಲ್ಯಾಣಿಯ ಹತ್ತಿರ ಭುವನೇಶ್ವರಿ ಮಂಟಪವನ್ನು 1817 ಮೇ 30 ರಂದು ಸ್ಥಾಪಿಸಿದ ಬಗ್ಗೆ ಮಾಹಿತಿ ಇದೆ.[77] ಹಾಗೂ 1830 ಫೆಬ್ರವರಿ 5 ರಂದು ಬೇಲೂರು ಚನ್ನಕೇಶವಸ್ವಾಮಿಗೆ ಬೆಳ್ಳಿಯಬಿಂದಿಗೆ ಕೊಡುಗೆ ಹಾಗೂ ನಾಮತೀರ್ಥ ತೊಟ್ಟಿಸೇವೆ ಬಗ್ಗೆ ಮಾಹಿತಿ ಇದೆ.[78] ಬಾಬಬುಡನ್‌ಗಿರಿಯ ದತ್ತಾತ್ರೇಯ ಪೀಠಕ್ಕೆ ಬೆಳ್ಳಿಯ ದೊಣ್ಣೆಯನ್ನು ಕೊಟ್ಟ ಬಗ್ಗೆ ಉಲ್ಲೇಖವಿದೆ [79]

ಮುಮ್ಮಡಿಯರು ಶೃಂಗೇರಿಯ ಮಠದಲ್ಲಿರುವ ಮಲ್ಲಿಕಾರ್ಜುನಸ್ವಾಮಿ ದೇವರಿಗೆ ಬೆಳ್ಳಿ ಬಲಿಪಾತ್ರೆ ಕೊಡುಗೆ ಕೊಟ್ಟ ಬಗ್ಗೆ,[80] ಶೃಂಗೇರಿಯ ಮಠಕ್ಕೆ ಬೆಳ್ಳಿಚೆಂಬು ದಾನ ನೀಡಿದ ಬಗ್ಗೆ[81] ಶೃಂಗೇರಿ ಮಠದಲ್ಲಿರುವ ಚಂದ್ರಮೌಳೇಶ್ವರಸ್ವಾಮಿಗೆ ಬೆಳ್ಳಿಪೀಠ ಕೊಡುಗೆ ಕೊಟ್ಟ ಬಗ್ಗೆ ಮಾಹಿತಿ ಇದೆ.[82] ಒಡೆಯರ ರಾಣಿಯರು ಶೃಂಗೇರಿಯ ಮಠಕ್ಕೆ ಬೆಳ್ಳಿತಟ್ಟೆ ಕೊಡುಗೆ ನೀಡಿದರು.[83] ಮಹಾರಾಜರು ಶೃಂಗೇರಿಯ ಮಠಕ್ಕೆ ರತ್ನದ ಕಿರೀಟ ಕೊಡುಗೆ ನೀಡಿದರು.[84] ಮಹಾರಾಜರ ರಾಣಿ ಶೃಂಗೇರಿಯ ಮಠಕ್ಕೆ ಬಂಗಾರದ ಆಭರಣಗಳ ಸಹಿತ ಬಟ್ಟಲು,[85] ಹಾಗೂ ಮಠಕ್ಕೆ ಬಂಗಾರದ ಬಟ್ಟಲಿನ ಸೇವೆ ಮಾಡಿದ ಬಗ್ಗೆ ಮಾಹಿತಿ.[86] ಜೊತೆಗೆ ಒಡೆಯರು ಶೃಂಗೇರಿಯ ಮಠಕ್ಕೆ ವಜ್ರಗಳು ಕೆತ್ತಿರುವ ಬಂಗಾರದ ಬಟ್ಟಲನ್ನು ದಾನ ನೀಡಿದ ಬಗ್ಗೆ ಮಾಹಿತಿ ಒದಗಿಸುತ್ತದೆ.[87]

ಸಕ್ಕರೆಪಟ್ಟಣ (ಮಾದ್ವಿಕಾಪುರ) ದಲ್ಲಿರುವ ರಂಗನಾಥದೇವಾಲಯದ ಮುಂದೆ ಗರುಡಕಂಭ ನಿರ್ಮಿಸಿ, ಲೋಹದ ತಗಡನ್ನು ಹಾಕಿಸಿದ ಬಗ್ಗೆ 1812 ಅಕ್ಟೋಬರ್ 13 ರ ಶಾಸನ ಉಲ್ಲೇಖಿಸಿದೆ.[88] ಮುಮ್ಮಡಿಯರು 1809 ಫೆಬ್ರವರಿ 24 ರಂದು ಕೊಪ್ಪ ತಾ. ಹೆದ್ಸೇ ಗ್ರಾಮದ ಉಮಾಮಹೇಶ್ವರ ದೇವಸ್ಥಾನಕ್ಕೆ ಬಗುಂಜಿ ಮಾಗಣಿಯ ಪಾಳ್ಯದಮಕಿ ಗ್ರಾಮವನ್ನು ಮತ್ತು ಸೀತಾನದಿ ತೀರದ ಬಂಜರು ಭೂಮಿಯನ್ನು ಕೊಟ್ಟ ಬಗ್ಗೆ ಹಾಗೂ ದೇವಾಲಯದ ಒಳಗೆ ಉಮಾಮಹೇಶ್ವರ, ಮಹಾಗಣಪತಿ, ದುರ್ಗಮ್ಮ, ಗೋಪಾಲಕೃಷ್ಣ, ಸೂರ್ಯ ನಾರಾಯಣಮೂರ್ತಿಗಳನ್ನು ಕೊಡುಗೆಯಾಗಿ ಕೊಟ್ಟ ಬಗ್ಗೆ ಮಾಹಿತಿ ಇದೆ.[89] ಹಾಗೂ ಇದೇ ಕೊಪ್ಪ ತಾಲ್ಲೂಕಿನ ಬಗುಂಜಿ ಮಾಗಣಿಯಲ್ಲಿರುವ ಪಾಳ್ಯದಮಕಿ ಗ್ರಾಮ ಮತ್ತು ಪಾಳು ಭೂಮಿಯನ್ನು (ಸೀತಾ ನದಿ ದಡದ ಮೇಲೆ ಇದೆ) ಗ್ರಾಮದ ಐದು ದೇವರುಗಳಾದ ಉಮಾಮಹೇಶ್ವರ,

ಗಣಪತಿ, ದುರ್ಗಮ್ಮ, ಗೋಪಾಲಕೃಷ್ಣ, ಸೂರ್ಯನಾರಾಯಣ ದೇವರುಗಳಿಗೆ ಕೊಡುಗೆ ನೀಡಿದ ಬಗ್ಗೆ 1809 ಫ್ರೆಬ್ರವರಿ 24 ರ ಶಾಸನ ಮಾಹಿತಿ ನೀಡುತ್ತದೆ.[90]

ನರಸಿಂಹರಾಜಪುರ ತಾ. ಬಾಳೇಹಳ್ಳಿಯ ಶ್ರೀಸಿದ್ದಲಿಂಗಸ್ವಾಮಿಗಳವರ ಸನ್ನಿಧಿಗೆ ವಾರ್ಷಿಕ 600 ವರಹಾಗಳನ್ನು ಕೊಡುಗೆ ಕೊಟ್ಟ ಬಗ್ಗೆ 1864 ಜುಲೈ 10 ರ ಶಾಸನ ಮಾಹಿತಿ ನೀಡಿದೆ.[91] ಹುಣಸೂರು ತಾ. ಮೂಕನಹಳ್ಳಿ ಗ್ರಾಮದ ನರಸಿಂಹಸ್ವಾಮಿ ದೇವಸ್ಥಾನಕ್ಕೆ ಮುಮ್ಮಡಿ ಕೃಷ್ಣರಾಜ ಒಡೆಯರು ಬಾಗಿಲು ಪಟ್ಟಿ ದಾನ ನೀಡಿದ ಬಗ್ಗೆ 1836–37 ರ ಶಾಸನ ಉಲ್ಲೇಖವಿದೆ.[92] ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಹುಣಸೂರು ತಾಲ್ಲೂಕಿನ ಬಿಳಿಕೆರೆ ಗ್ರಾಮದ ಅಂಜನೇಯಸ್ವಾಮಿ ದೇವಸ್ಥಾನದ ಕಂಬಗಳ ಮೇಲೆ ಜಯವೆಂಕಟೇಶನ ಜೊತೆಗೆ ಅಂಜನೇಯ ಮೂರ್ತಿಶಿಲ್ಪವನ್ನು ಪ್ರತಿಷ್ಠಾಪಿಸಿದ ಬಗ್ಗೆ ಮಾಹಿತಿ ಇದೆ.[93]

ಮುಮ್ಮಡಿ ಕೃಷ್ಣರಾಜ ಒಡೆಯರು ಹಾರನಹಳ್ಳಿ (ಆರಸೀಕರೆ.ತಾ)ಯ ಪರಮಾನಂದ ಸ್ವಾಮಿಗಳವರ ವೇದಿಕೆಯ ಜೀರ್ಣೋದ್ದಾರ ಹಾಗೂ ವ್ಯವಸ್ಥೆಗಾಗಿ ಕಸಬಕೆರೆ ಹಿಂದೆ ಭೂಮಿ ಹಾಗೂ ಮಾಕನಹಳ್ಳಿ ಗ್ರಾಮವನ್ನು ದಾನ ಕೊಟ್ಟ ಬಗ್ಗೆ 1817 ಮಾರ್ಚು 3 ರ ಶಾಸನ ಉಲ್ಲೇಖಿಸಿದೆ. [94.] ಬೆಳಗೋಡು ಮಡಿವಾಳಸ್ವಾಮಿಗೆ ಭೂಮಿ ಕೊಟ್ಟು ಚಿದಾರಣ್ಯದಲ್ಲಿ ಶಿವಯೋಗ ಇರತಕ್ಕ ಲಿಂಗಮುದ್ರೆ ಸ್ಥಾಪಿಸಿ ಕೊಟ್ಟ ಬಗ್ಗೆ ಉಲ್ಲೇಖವಿದೆ.[95] ವಿಜಯಪುರದ(ಟಿ.ನರಸೀಪುರ ತಾ.) ಮೂಲ ಸ್ಥಾನೇಶ್ವರ ದೇವರಿಗೆ ಲಿಂಗ ಪ್ರತಿಷ್ಠಾಪಿಸಿ,ನೈವೇಧ್ಯಕ್ಕೆ ದಾನ ನೀಡಿದ ಬಗ್ಗೆ 1855 ಅಕ್ಟೋಬರ್ 13 ರ ಶಾಸನ ಮಾಹಿತಿ ನೀಡುತ್ತದೆ.[96]

**ಉಪಸಂಹಾರ**

ಈ ಮೇಲಿನ ಎಲ್ಲಾ ಶಾಸನ ಆಧಾರಿತ ಮಾಹಿತಿಯನ್ನು ಗಮನಿಸಿದಾಗ ಮುಮ್ಮಡಿ ಕೃಷ್ಣರಾಜ ಒಡೆಯರು ದಕ್ಷ ಆಡಳಿತಗಾರರಾಗಿ, ಉದಾರ ದಾನಿಗಳಾಗಿ, ಸಂಸ್ಥಾನದ ಆಯಕಟ್ಟಿನ ಸ್ಥಳಗಳಲ್ಲಿ ಜನೋಪಯೋಗಿ ಕಾರ್ಯಗಳನ್ನು ಮಾಡಿ ಇಂದಿಗೂ ಮಹಾರಾಜರು ಜನಜನಿತರಾಗಿದ್ದಾರೆ. ಇಂತಹ ಮಹಾನ್ ಸಾಧಕರ ಸಾಧನೆಗಳನ್ನು ಇಂದಿನ ಸಮಾಜದ ಮಹಾನ್ ನಾಯಕರೆನಿಸಿಕೊಂಡವರು ಸ್ವಾರ್ಥವನ್ನು ಬದಿಗೊತ್ತಿ ಸಮಾಜದ ಒಳಿತಿಗಾಗಿ ದುಡಿಯ ಬೇಕಾಗಿದೆ.

**ಕೊನೆಟಿಪ್ಪಣಿಗಳು**

1. ಎಪಿಗ್ರಾಫಿಯ ಕರ್ನಾಟಿಕ. ಸಂ. 05, 37 (xiv ಮೈ 61) ಮೈಸೂರು–ಪುಟ–181–182.
2. ಎಪಿಗ್ರಾಫಿಯ ಕರ್ನಾಟಿಕ. ಸಂ. 05, 01 (iii ಮೈ 1) ಮೈಸೂರು–ಪುಟ–144–145.
3. ಎಪಿಗ್ರಾಫಿಯ ಕರ್ನಾಟಿಕ. ಸಂ. 05, 02 (iii ಮೈ 1) ಮೈಸೂರು–ಪುಟ–146.
4. ಎಪಿಗ್ರಾಫಿಯ ಕರ್ನಾಟಿಕ. ಸಂ. 05, 49 (xiv ಮೈ 73) ಮೈಸೂರು–ಪುಟ–186
5. ಎಪಿಗ್ರಾಫಿಯ ಕರ್ನಾಟಿಕ. ಸಂ. 05, 24 (ರಿ1938, 35) ಮೈಸೂರು–ಪುಟ–160
6. ಎಪಿಗ್ರಾಫಿಯ ಕರ್ನಾಟಿಕ. ಸಂ. 05, 19 (ರಿ 1938, 29) ಮೈಸೂರು–ಪುಟ–158
7. ಎಪಿಗ್ರಾಫಿಯ ಕರ್ನಾಟಿಕ. ಸಂ. 05, 24 (ರಿ 1938, 34) ಮೈಸೂರು–ಪುಟ–160
8. ಎಪಿಗ್ರಾಫಿಯ ಕರ್ನಾಟಿಕ. ಸಂ. 05, 03 ( iii ಮೈ 1) ಮೈಸೂರು–ಪುಟ–146–147
9. ಎಪಿಗ್ರಾಫಿಯ ಕರ್ನಾಟಿಕ. ಸಂ. 05, 97 (ರಿ 1936, 35) ಮೈಸೂರು–ಪುಟ–206

10. ಎಪಿಗ್ರಾಫಿಯ ಕರ್ನಾಟಿಕ. ಸಂ. 05, 97 (ರಿ 1936, 35) ಮೈಸೂರು–ಪುಟ–206
11. ಎಪಿಗ್ರಾಫಿಯ ಕರ್ನಾಟಿಕ. ಸಂ. 05, 1 (iii ಮೈ 1) ಮೈಸೂರು–ಪುಟ–144–145
12. ಎಪಿಗ್ರಾಫಿಯ ಕರ್ನಾಟಿಕ. ಸಂ. 05, 2 (iii ಮೈ 2) ಮೈಸೂರು–ಪುಟ–145
13. ಎಪಿಗ್ರಾಫಿಯ ಕರ್ನಾಟಿಕ. ಸಂ. 05, 3 (iii ಮೈ 3) ಮೈಸೂರು–ಪುಟ–146–147
14. ಎಪಿಗ್ರಾಫಿಯ ಕರ್ನಾಟಿಕ. ಸಂ. 05, 53 (xiv ಮೈ 77) ಮೈಸೂರು–ಪುಟ–187
15. ಎಪಿಗ್ರಾಫಿಯ ಕರ್ನಾಟಿಕ. ಸಂ. 05, 54 (xiv ಮೈ 78) ಮೈಸೂರು–ಪುಟ–188
16. ಎಪಿಗ್ರಾಫಿಯ ಕರ್ನಾಟಿಕ. ಸಂ. 05, 55 (xiv ಮೈ 79) ಮೈಸೂರು–ಪುಟ–188
17. ಎಪಿಗ್ರಾಫಿಯ ಕರ್ನಾಟಿಕ. ಸಂ. 05, 56 (xiv ಮೈ 80) ಮೈಸೂರು–ಪುಟ–189
18. ಎಪಿಗ್ರಾಫಿಯ ಕರ್ನಾಟಿಕ. ಸಂ. 05, 57 (xiv ಮೈ 81) ಮೈಸೂರು–ಪುಟ–189
19. ಎಪಿಗ್ರಾಫಿಯ ಕರ್ನಾಟಿಕ. ಸಂ. 05, 58 (xiv ಮೈ 82) ಮೈಸೂರು–ಪುಟ–189
20. ಎಪಿಗ್ರಾಫಿಯ ಕರ್ನಾಟಿಕ. ಸಂ. 05, 59 (xiv ಮೈ 83) ಮೈಸೂರು–ಪುಟ–189
21. ಎಪಿಗ್ರಾಫಿಯ ಕರ್ನಾಟಿಕ. ಸಂ. 05, 60 (xiv ಮೈ 84) ಮೈಸೂರು–ಪುಟ–189
22. ಎಪಿಗ್ರಾಫಿಯ ಕರ್ನಾಟಿಕ. ಸಂ. 05, 61 (xiv ಮೈ 85) ಮೈಸೂರು–ಪುಟ–189
23. ಎಪಿಗ್ರಾಫಿಯ ಕರ್ನಾಟಿಕ. ಸಂ. 05, 63 (xiv ಮೈ 87) ಮೈಸೂರು–ಪುಟ–191
24. ಎಪಿಗ್ರಾಫಿಯ ಕರ್ನಾಟಿಕ. ಸಂ. 05, 64 (xiv ಮೈ 88) ಮೈಸೂರು–ಪುಟ–191
25. ಎಪಿಗ್ರಾಫಿಯ ಕರ್ನಾಟಿಕ. ಸಂ. 05, 67 (xiv ಮೈ 90) ಮೈಸೂರು–ಪುಟ–191
26. ಎಪಿಗ್ರಾಫಿಯ ಕರ್ನಾಟಿಕ. ಸಂ. 05, 69 (xiv ಮೈ 92) ಮೈಸೂರು–ಪುಟ–191
27. ಎಪಿಗ್ರಾಫಿಯ ಕರ್ನಾಟಿಕ. ಸಂ. 05, 71 (xiv ಮೈ 93) ಮೈಸೂರು–ಪುಟ–193
28. ಎಪಿಗ್ರಾಫಿಯ ಕರ್ನಾಟಿಕ. ಸಂ. 05, 97 (ರಿ 1936–35) ಮೈಸೂರು–ಪುಟ–206
29. ಎಪಿಗ್ರಾಫಿಯ ಕರ್ನಾಟಿಕ. ಸಂ. 05,,143 (xiv ಮೈ 141) ಚಾಮುಂಡಿಬೆಟ್ಟ,ಪುಟ– 279
30. ಎಪಿಗ್ರಾಫಿಯ ಕರ್ನಾಟಿಕ. ಸಂ. 05, 144 (xiv ಮೈ 142) ಚಾಮುಂಡಿಬೆಟ್ಟ, ಪುಟ–279
31. ಎಪಿಗ್ರಾಫಿಯ ಕರ್ನಾಟಿಕ. ಸಂ. 05, 146 (xiv ಮೈ 144) ಚಾಮುಂಡಿಬೆಟ್ಟ,ಪುಟ– 280
32. ಎಪಿಗ್ರಾಫಿಯ ಕರ್ನಾಟಿಕ. ಸಂ. 05, 150 (xiv ಮೈ 21) ಚಾಮುಂಡಿಬೆಟ್ಟ,ಪುಟ–281
33. ಎಪಿಗ್ರಾಫಿಯ ಕರ್ನಾಟಿಕ. ಸಂ. 05, 151 (xiv ಮೈ 22) ಚಾಮುಂಡಿಬೆಟ್ಟ,ಪುಟ– 282–283
34. ಎಪಿಗ್ರಾಫಿಯ ಕರ್ನಾಟಿಕ. ಸಂ. 05, 152 (xiv ಮೈ 129) ಚಾಮುಂಡಿಬೆಟ್ಟ,ಪುಟ– 282–283
35. ಎಪಿಗ್ರಾಫಿಯ ಕರ್ನಾಟಿಕ. ಸಂ. 05, 153 (xiv ಮೈ130) ಚಾಮುಂಡಿಬೆಟ್ಟ,ಪುಟ–283–284
36. ಎಪಿಗ್ರಾಫಿಯ ಕರ್ನಾಟಿಕ. ಸಂ. 05, 154 (xiv ಮೈ 131) ಚಾಮುಂಡಿಬೆಟ್ಟ, ಪುಟ–284
37. ಎಪಿಗ್ರಾಫಿಯ ಕರ್ನಾಟಿಕ. ಸಂ. 05, 155 (xiv ಮೈ 132) ಚಾಮುಂಡಿಬೆಟ್ಟ, ಪುಟ–284
38. ಎಪಿಗ್ರಾಫಿಯ ಕರ್ನಾಟಿಕ. ಸಂ. 05, 156 (xiv ಮೈ 132) ಚಾಮುಂಡಿಬೆಟ್ಟ, ಪುಟ–284

39. ಎಪಿಗ್ರಾಫಿಯ ಕರ್ನಾಟಿಕ. ಸಂ. 05, 157 (xiv ಮೈ 133) ಚಾಮುಂಡಿಬೆಟ್ಟ, ಪುಟ–285
40. ಎಪಿಗ್ರಾಫಿಯ ಕರ್ನಾಟಿಕ. ಸಂ. 05, 145 ( xiv ಮೈ 142) ಉತ್ತನಹಳ್ಳಿ, ಪುಟ–279
41. ಎಪಿಗ್ರಾಫಿಯ ಕರ್ನಾಟಿಕ. ಸಂ. 05, 73 ( xiv ಮೈ 95 ) ಮೈಸೂರು, ಪುಟ–193–44
42. ಎಪಿಗ್ರಾಫಿಯ ಕರ್ನಾಟಿಕ. ಸಂ. 05, 74 ( xiv ಮೈ 96) ಮೈಸೂರು ಪುಟ–194
43. ಎಪಿಗ್ರಾಫಿಯ ಕರ್ನಾಟಿಕ. ಸಂ. 05, 76 ( xiv ಮೈ 98) ಮೈಸೂರು ಪುಟ–195
44. ಎಪಿಗ್ರಾಫಿಯ ಕರ್ನಾಟಿಕ. ಸಂ. 05, 77 ( xiv ಮೈ 98) ಮೈಸೂರು ಪುಟ–196
45. ಎಪಿಗ್ರಾಫಿಯ ಕರ್ನಾಟಿಕ. ಸಂ. 05, 166 ( iii ಮೈ 34) ವರುಣಾ ಪುಟ–292
46. ಎಪಿಗ್ರಾಫಿಯ ಕರ್ನಾಟಿಕ. ಸಂ. 05, 118 (ರಿ 1942–77) ಸೊಸಲೆ, ಟಿ.ನರಸೀಪುರ, ಪುಟ–538
47. ಎಪಿಗ್ರಾಫಿಯ ಕರ್ನಾಟಿಕ. ಸಂ. 05, 119 (ರಿ 1942–78) ಸೊಸಲೆ, ಟಿ.ನರಸೀಪುರ, ಪುಟ–538
48. ಎಪಿಗ್ರಾಫಿಯ ಕರ್ನಾಟಿಕ. ಸಂ. 05, 272 (xiv ತಿನ257) ಮೂಗೂರು,ಟಿ.ನರಸೀಪುರ,ಪುಟ–538.
49. ಎಪಿಗ್ರಾಫಿಯ ಕರ್ನಾಟಿಕ. ಸಂ. 05, 05,140(ಋ ತಿನ 57) ವಿಜಯಪುರ,ಟಿ.ನರಸೀಪುರ,ಪುಟ–549
50. ಎಪಿಗ್ರಾಫಿಯ ಕರ್ನಾಟಿಕ. ಸಂ. 03, 13(x iv ನಂ 274) ನಂಜನಗೂಡು, ಪುಟ–167
51. ಎಪಿಗ್ರಾಫಿಯ ಕರ್ನಾಟಿಕ. ಸಂ. 03, 94(x iv ನಂ277) ನಂಜನಗೂಡು, ಪುಟ–175
52. ಎಪಿಗ್ರಾಫಿಯ ಕರ್ನಾಟಿಕ. ಸಂ. 03, 101(xiv ನಂ287) ನಂಜನಗೂಡು,ಪುಟ–177
53. ಎಪಿಗ್ರಾಫಿಯ ಕರ್ನಾಟಿಕ. ಸಂ. 03, 103(x iv ನಂ 289) ನಂಜನಗೂಡು,ಪುಟ–178
54. ಎಪಿಗ್ರಾಫಿಯ ಕರ್ನಾಟಿಕ. ಸಂ. 03, 10 (x iv ನಂ 292) ನಂಜನಗೂಡು, ಪುಟ–18
55. ಎಪಿಗ್ರಾಫಿಯ ಕರ್ನಾಟಿಕ. ಸಂ. 03, 105(x iv ನಂ 293) ನಂಜನಗೂಡು,ಪುಟ–184
56. ಎಪಿಗ್ರಾಫಿಯ ಕರ್ನಾಟಿಕ. ಸಂ. 03, 106(x iv ನಂ 294) ನಂಜನಗೂಡು,ಪುಟ–186
57. ಎಪಿಗ್ರಾಫಿಯ ಕರ್ನಾಟಿಕ. ಸಂ. 03, 21( x iv ನಂ 282) ನಂಜನಗೂಡು, ಪುಟ–170
58. ಎಪಿಗ್ರಾಫಿಯ ಕರ್ನಾಟಿಕ. ಸಂ. 03, 107.108(iii ನಂ.ಗೂ13,14) ನಂಜನಗೂಡು,ಪುಟ–187
59. ಎಪಿಗ್ರಾಫಿಯ ಕರ್ನಾಟಿಕ. ಸಂ. 04, 248 (iv ಚಾನ 136) ಗುಡ್ಡದಮಠ, ಪುಟ–152
60. ಎಪಿಗ್ರಾಫಿಯ ಕರ್ನಾಟಿಕ. ಸಂ. 04, 7 (iv ಚಾನ 88) ಚಾಮರಾಜನಗರ ಪುಟ–10–11
61. ಎಪಿಗ್ರಾಫಿಯ ಕರ್ನಾಟಿಕ. ಸಂ. 04, 56 (xiv ಚಾನ 249) ಚಾಮರಾಜನಗರ ಪುಟ–36
62. ಎಪಿಗ್ರಾಫಿಯ ಕರ್ನಾಟಿಕ. ಸಂ. 04, 58 (xiv ಚಾನ 251) ಚಾಮರಾಜನಗರ ಪುಟ–36
63. ಎಪಿಗ್ರಾಫಿಯ ಕರ್ನಾಟಿಕ. ಸಂ. 03, 118(xiv ಗು, ಪೇ19)ತೆರಕಣಾಂಬಿ,ಗುಂಡ್ಲುಪೇಟೆ,ಪುಟ–88.
64. ಎಪಿಗ್ರಾಫಿಯ ಕರ್ನಾಟಿಕ. ಸಂ. 03, 100 (iv ಗು, ಪೇ 18) ಕೆಲಸೂರು , ಪುಟ–74,
65. ಎಪಿಗ್ರಾಫಿಯ ಕರ್ನಾಟಿಕ. ಸಂ. 06, 19 (iii ಶ್ರೀಪ 8) ಶ್ರೀರಂಗಪಟ್ಟಣ, ಪುಟ–342
66. ಎಪಿಗ್ರಾಫಿಯ ಕರ್ನಾಟಿಕ. ಸಂ. 06, 33 (iii ಶ್ರೀಪ 9) ಶ್ರೀರಂಗಪಟ್ಟಣ, ಪುಟ–376
67. ಎಪಿಗ್ರಾಫಿಯ ಕರ್ನಾಟಿಕ. ಸಂ. 06, 12 (xiv ಶ್ರೀಪ 165) ಶ್ರೀರಂಗಪಟ್ಟಣ, ಪುಟ–340.

68. ಎಪಿಗ್ರಾಫಿಯ ಕರ್ನಾಟಿಕ. ಸಂ. 06, 57 (xiv ಶ್ರೀಪ 189) ಚಂದ್ರವನ, ಪುಟ–390
69. ಎಪಿಗ್ರಾಫಿಯ ಕರ್ನಾಟಿಕ. ಸಂ. 06, 23(iv ಕೃಪೇ25) ಕನ್ನಂಬಾಡಿ,ಪಾಂಡವಪುರ ತಾ. ಪುಟ–122
70. ಎಪಿಗ್ರಾಫಿಯ ಕರ್ನಾಟಿಕ. ಸಂ. 06, 40(xiv ಕೃಪೇ96) ಕನ್ನಂಬಾಡಿ, ಪಾಂಡವಪುರ ತಾ. ಪುಟ–130
71. ಎಪಿಗ್ರಾಫಿಯ ಕರ್ನಾಟಿಕ. ಸಂ. 06,, 94 (j 1940–39) ಮೇಲುಕೋಟೆ, ಪುಟ–205
72. ಎಪಿಗ್ರಾಫಿಯ ಕರ್ನಾಟಿಕ. ಸಂ. 06,, 168(xiv ಶ್ರೀಪ286) ಮೇಲುಕೋಟೆ, ಪುಟ–251
73. ಎಪಿಗ್ರಾಫಿಯ ಕರ್ನಾಟಿಕ. ಸಂ. 06,, 170 (xiv ಶ್ರೀಪ 288) ಮೇಲುಕೋಟೆ, ಪುಟ–252
74. ಎಪಿಗ್ರಾಫಿಯ ಕರ್ನಾಟಿಕ. ಸಂ. 06,, 173 (xiv ಶ್ರೀಪ 291) ಮೇಲುಕೋಟೆ, ಪುಟ–253
75. ಎಪಿಗ್ರಾಫಿಯ ಕರ್ನಾಟಿಕ. ಸಂ. 06,, 207 (xiv ಶ್ರೀಪ 98) ಮೇಲುಕೋಟೆ, ಪುಟ–264–65
76. ಎಪಿಗ್ರಾಫಿಯ ಕರ್ನಾಟಿಕ. ಸಂ. 06,, 159(xiv ಶ್ರೀಪ 278) ಮೇಲುಕೋಟೆ, ಪುಟ–244–245
77. ಎಪಿಗ್ರಾಫಿಯ ಕರ್ನಾಟಿಕ. ಸಂ. 06,, 188 (xiv ಶ್ರೀಪ 84) ಮೇಲುಕೋಟೆ ಪುಟ–259
78. ಎಪಿಗ್ರಾಫಿಯ ಕರ್ನಾಟಿಕ. ಸಂ. 06, 27 (xv ಬೇ 283) ಬೇಲೂರು, ಹಾಸನ, ಪುಟ–21
79. ಎಪಿಗ್ರಾಫಿಯ ಕರ್ನಾಟಿಕ. ಸಂ. 11, 196(ರಿ.1932–28) ಬಾಬಬುಡನ್‌ಗಿರಿ, ಚಿಕ್ಕಮಗಳೂರು,ಪುಟ 124
80. ಎಪಿಗ್ರಾಫಿಯ ಕರ್ನಾಟಿಕ. ಸಂ. 11, 10 (ರಿ.1933–07) ಶೃಂಗೇರಿ, ಪುಟ– 252
81. ಎಪಿಗ್ರಾಫಿಯ ಕರ್ನಾಟಿಕ. ಸಂ. 11,, 12 (ರಿ.1933–07) ಶೃಂಗೇರಿ, ಪುಟ– 253
82. ಎಪಿಗ್ರಾಫಿಯ ಕರ್ನಾಟಿಕ. ಸಂ. 11,, 13 (ರಿ.1933–10) ಶೃಂಗೇರಿ, ಪುಟ– 253
83. ಎಪಿಗ್ರಾಫಿಯ ಕರ್ನಾಟಿಕ. ಸಂ. 11,, 14 (ರಿ.1933–11) ಶೃಂಗೇರಿ, ಪುಟ– 253
84. ಎಪಿಗ್ರಾಫಿಯ ಕರ್ನಾಟಿಕ. ಸಂ. 11,, 18 (ರಿ.1933–15) ಶೃಂಗೇರಿ, ಪುಟ– 255
85. ಎಪಿಗ್ರಾಫಿಯ ಕರ್ನಾಟಿಕ. ಸಂ. 11,, 19 (ರಿ.1933–16) ಶೃಂಗೇರಿ, ಪುಟ– 255
86. ಎಪಿಗ್ರಾಫಿಯ ಕರ್ನಾಟಿಕ. ಸಂ. 11,, 20 (ರಿ.1933–17) ಶೃಂಗೇರಿ, ಪುಟ– 255
87. ಎಪಿಗ್ರಾಫಿಯ ಕರ್ನಾಟಿಕ. ಸಂ. 11,, 21 (ರಿ.1933–18) ಶೃಂಗೇರಿ, ಪುಟ– 255
88. ಎಪಿಗ್ರಾಫಿಯ ಕರ್ನಾಟಿಕ. ಸಂ. 12, 209(ರಿ.1927–45) ಸಕ್ಕರೆಪಟ್ಟಣ, ಕಡೂರು.ತಾ. ಪುಟ–239,
89. ಎಪಿಗ್ರಾಫಿಯ ಕರ್ನಾಟಿಕ. ಸಂ. 12, 39 (vi ಕೊ, 48) ಹದ್ಸೆ, ಕೊಪ್ಪ ತಾ.
90. ಎಪಿಗ್ರಾಫಿಯ ಕರ್ನಾಟಿಕ. ಸಂ. 12, 39 (vi ಕೊ 48) ಹೆದ್ಸೆ, ಕೊಪ್ಪ ತಾ,. ಪುಟ–330
91. ಎಪಿಗ್ರಾಫಿಯ ಕರ್ನಾಟಿಕ. ಸಂ. 12, 26(ರಿ,1927,56) ಬಾಳೇಹಳ್ಳೀ, ನರಸಿಂಹರಾಜಪುರ, ಪುಟ–464
92. ಎಪಿಗ್ರಾಫಿಯ ಕರ್ನಾಟಿಕ. ಸಂ. 5, 18 (IV ಹು 8) ಮೂಕನಹಳ್ಳಿ, ಹುಣಸೂರು–ಪುಟ–493
93. ಎಪಿಗ್ರಾಫಿಯ ಕರ್ನಾಟಿಕ. ಸಂ. 5, 21 ( iv ಹು 12 ) ಬಿಳಿಕೆರೆ, ಹುಣಸೂರು–ಪುಟ–494
94. ಎಪಿಗ್ರಾಫಿಯ ಕರ್ನಾಟಿಕ. ಸಂ. 5, 239 (xv ಅ ಕೆ 214) ಹಾರನಹಳ್ಳಿ, ಅರಸೀಕರೆ ಪುಟ–292
95. ಎಪಿಗ್ರಾಫಿಯ ಕರ್ನಾಟಿಕ. ಸಂ. 5, 23 (v ಮುಂಬಾಲಾಂ) ಬೆಳಗೋಡು, ಸಕಲೇಶಪುರ, ಪುಟ–515
96. ಎಪಿಗ್ರಾಫಿಯ ಕರ್ನಾಟಿಕ. ಸಂ. 1, 40 (iii ತಿನ 57) ವಿಜಯಪುರ, ಟಿ.ನರಸೀಪುರ, ಪುಟ–549

**ಪರಾಮರ್ಶನ ಗ್ರಂಥಗಳು**


- ಗೋಪಾಲ್ ಆರ್. (2010). ಮೈಸೂರು ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ. ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು.
- ನಂಜರಾಜ ಅರಸು. ಪಿ.ವಿ. (2008). ನೂರಿನ್ನೂರು ವರ್ಷಗಳ ಹಿಂದೆ. ಅಭಿರುಚಿ ಪ್ರಕಾಶನ, ಮೈಸೂರು.
- ನಿರಂಜನರಾಜ ಅರಸು. ಪಿ.ಎನ್. (1993). ಮುಮ್ಮಡಿಕೃಷ್ಣರಾಜಮಹೀಪಾಲ ವಂಶರತ್ನಾಕರ. ಪ್ರಕಾಶಕರು: ಲೇಖಕ, ಮೈಸೂರು.
- ರಾಜೇಂದ್ರ ಡಿ.ಕೆ ಮತ್ತು ಇತರರು. (ಸಂ.) (2011) ಮೈಸೂರು ದರ್ಶನ ಸಂಪುಟ 1, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು.
- ಸೂರ್ಯನಾಥ ಯು ಕಾಮತ್ (ಪ್ರ. ಸಂ.) (1984). ಕರ್ನಾಟಕ ರಾಜ್ಯ ಗ್ಯಾಜೆಟಿಯರ್, ಭಾಗ–1, ಕರ್ನಾಟಕ ರಾಜ್ಯ ಸರ್ಕಾರದ ಪ್ರಕಟಣೆ, ಬೆಂಗಳೂರು.